ಓ ಎಸ್ ನಂ.15/2024
ಪಿ.ಡಬ್ಲ್ಯೂ-4 ಪ್ರಕಾಶ ತಂದೆ ರಾಮಣ್ಣ ದೊಡ್ಡಮನಿ

**(ಇಂದು ದಿನಾಂಕಃ 23-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಪಿ ಬಿ ಪಿ ವಕೀಲರಿಂದ.

ನಾನು ಬನ್ನಟ್ಟಿ ಗ್ರಾಮದವನು ಎಂದರೆ ಸರಿ. ವಾದಿ ನನ್ನ ಹತ್ತಿರದ ಸಂಬಂಧಿಕರು ಎಂದರೆ ಸರಿ. ೩ನೇ ಪ್ರತಿವಾದಿಗೆ ವಾದಿಯ ಮಗಳನ್ನು ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ೩ನೇ ಪ್ರತಿವಾದಿ ಮತ್ತು ಅವರ ಹೆಂಡತಿಯಾದ ಪದ್ಮಾವತಿರವರ ನಡುವೆ ನ್ಯಾಯಾಲಯದಲ್ಲಿ ಕೇಸುಗಳು ನಡೆದಿವೆ ಎಂದರೆ ನನಗೆ ಗೊತ್ತಿಲ್ಲ. ಅವರನ್ನು ಒಂದುಗೂಡಿಸಲು ಸಾಕಷ್ಟು ಪಂಚಾಯಿತಿ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಂಚಾಯಿತಿಯಲ್ಲಿ ೩ನೇ ಪ್ರತಿವಾದಿ ನನ್ನ ಮಾತು ಕೇಳದ ಕಾರಣ ನಾನು ವಾದಿಗೆ ಹೇಳಿ ಈ ದಾವೆಯನ್ನು ಮಾಡಿಸಿ, ಈಗ ವಾದಿಗೆ ಸಹಾಯ ಮಾಡಲು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು.

೨. ನನ್ನ ಮುಖ್ಯ ವಿಚಾರಣೆಯಲ್ಲಿ ಯಾವ ಸರ್ವೆ ನಂಬರಗಳು ಬರೆಯಲಾಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿಯು ೩-೪ ಸರ್ವೆ ನಂಬರಗಳು ಇರುತ್ತವೆ ಎನ್ನುತ್ತಾರೆ. ಅವು ಸುಮಾರು ೧೮ ರಿಂದ ೨೦ ಎಕರೆ ಜಮೀನು ಇದ್ದು, ಯಾವ ಸರ್ವೆ ನಂಬರನಲ್ಲಿ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಈ ದಾವೆ ಮತ್ತು ದಾವಾ ಆಸ್ತಿಗಳ ಕುರಿತು ನನಗೆ ಪೂರ್ಣ ಮಾಹಿತಿ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಯ ತಾತನಾದ ಬಸವಂತರಾಯರವರನ್ನು ನಾನು ನೋಡಿಲ್ಲ. ಬಸವಂತರಾಯರವರಿಂದ ಅವರ ಮಗ

ಆನಂದರಾಯರವರಿಗೆ ಸುಮಾರು ೮-೧೦ ಎಕರೆ ಜಮೀನು ಬಂದಿರುತ್ತದೆ. ಅದರ ಸರ್ವೆ ನಂಬರ ನನಗೆ ಗೊತ್ತಿಲ್ಲ ಮತ್ತು ನಾನು ಸದರಿ ಜಮೀನಿನ ಪಹಣಿ ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನು ಇದ್ದ ಬಗ್ಗೆ ನನಗೆ ಗೊತ್ತು ಎನ್ನುತ್ತಾರೆ. ದಾವಾ ಆಸ್ತಿಗಳು ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಯು ಎಲ್ಲರು ಸೇರಿ ದುಡಿದು ಗಳಿಸಿದ ಆಸ್ತಿಯಾಗಿರುತ್ತವೆ ಎನ್ನುತ್ತಾರೆ. ಸದರಿ ಆಸ್ತಿಗಳು ಸ್ವಂತ ಗಳಿಸಿದ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ.

೩. ವಾದಿ ನನ್ನನ್ನು ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನಾನು ವಾದಿಗೆ ಸಹಾಯ ಮಾಡಲು ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಸೊನ್ನ ಗ್ರಾಮದಲ್ಲಿದ್ದು, ನನ್ನ ಊರು ಬನ್ನಟ್ಟಿ ಆಗಿರುವುದರಿಂದ ದಾವಾ ಆಸ್ತಿಗಳ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.